# ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಶಿವಮೊಗ್ಗ.

ನಂ.415, ಬಸವಚೇತನ, 100 ಅಡಿ ರಸ್ತೆ, ರವೀಂದ್ರ ನಗರ,e-mail- dobcmshimoga@gmail.com☏ (08182) 222129.

ಸಂ/ಹಿಂವಕಇ/ಸಿಬ್ಬಂದಿ/ಎ-3/ನೇ.ನೇ/ಸಿಆರ್-89/2016-17 ದಿನಾಂಕ-12-1-2018

## ಕೌನ್ಸ್‌ಲಿಂಗ್‌ಗೆ ಹಾಜರಾಗುವ ಬಗ್ಗೆ

ಸರ್ಕಾರದ ಆದೇಶ ಸಂ: ಹಿಂವಕ 12 ಬಿಇಟಿ 2018 ದಿ: 8-1-2018 ರ ಆದೇಶದಲ್ಲಿ ನಿರ್ದೇಶಿಸಿರುವಂತೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಆಯ್ಕೆ ಸಮಿತಿ, ಶಿವಮೊಗ್ಗ ಇವರ ಅನುಮೋದನೆಯಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗಳಿಗೆ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿದ್ದು, ಕ್ರಮವಾಗಿ ದಿ: 22-12-2017 ಮತ್ತು ದಿ: 10-1-2018 ರಂದು ನಡೆಸಲಾದ ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗಿ ದಾಖಲಾತಿ ಸಲ್ಲಿಸಿರುವ, ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಸಂಬಂಧ ಸ್ಥಳ ಆಯ್ಕೆಗಾಗಿ ಕೌನ್ಸ್‌ಲಿಂಗ್ ನಡೆಸಲು ನಿರ್ಧರಿಸಲಾಗಿದೆ. ಕೌನ್ಸ್‌ಲಿಂಗ್ ನಡೆಸುವ ಸ್ಥಳ ಹಾಗೂ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.

| ಕೌನ್ಸ್‌ಲಿಂಗ್ ನಡೆಸುವ ಸ್ಥಳ | ಹುದ್ದೆ | ದಿನಾಂಕ | ವೇಳಾಪಟ್ಟಿ |
|---|---|---|---|
| ಡಿ.ದೇವರಾಜ ಅರಸು ಭವನ, ಬೈಪಾಸ್ ರಸ್ತೆ, ಎಂ.ಆರ್.ಎಸ್.ಸರ್ಕಲ್, ಸಹ್ಯಾದ್ರಿ ಕಾಲೇಜ್ ಹತ್ತಿರ, ಶಿವಮೊಗ್ಗ ಟೌನ್ | ಅಡುಗೆಯವರು | 18-01-2018 | ಬೆಳಿಗ್ಗೆ 9:30 ಗಂಟೆಯಿಂದ ಮಧ್ಯಾಹ್ನ 1:00 ಗಂಟೆಯವರೆಗೆ |
| ಡಿ.ದೇವರಾಜ ಅರಸು ಭವನ, ಬೈಪಾಸ್ ರಸ್ತೆ, ಎಂ.ಆರ್.ಎಸ್.ಸರ್ಕಲ್, ಸಹ್ಯಾದ್ರಿ ಕಾಲೇಜ್ ಹತ್ತಿರ, ಶಿವಮೊಗ್ಗ ಟೌನ್ | ಅಡುಗೆ ಸಹಾಯಕರು | | ಮಧ್ಯಾಹ್ನ 2-00 ಗಂಟೆಯಿಂದ ಸಾಯಂಕಾಲ 5-30 ರವರೆಗೆ |

ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿದ್ದು ಮೂಲ ದಾಖಲಾತಿ ಸಲ್ಲಿಸಿ ಅರ್ಹರಿರುವ ಅಭ್ಯರ್ಥಿಗಳು ಮೇಲ್ಕಂಡ ಸ್ಥಳ ಹಾಗೂ ದಿನಾಂಕದಂದು ಕೌನ್ಸ್‌ಲಿಂಗ್‌ಗೆ ಸ್ವತಃ ತಪ್ಪದೇ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ.

ಕೌನ್ಸ್‌ಲಿಂಗ್ ನಡೆಸುವ ಸ್ಥಳದ ಮುಂಭಾಗದಲ್ಲಿ ಖಾಲಿ ಹುದ್ದೆಗಳ ವಿವರಗಳನ್ನು ನೋಟಿಸ್ ಬೋರ್ಡ್ ನಲ್ಲಿ ಪ್ರಕಟಿಸಲಾಗುವುದು. ಕೌನ್ಸ್‌ಲಿಂಗ್‌ಗೆ ಹಾಜರಾಗುವ ಮುನ್ನ ಖಾಲಿ ಹುದ್ದೆಗಳನ್ನು ಪರಿಶೀಲಿಸಿಕೊಂಡು ಒಂದು ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವುದು.

ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ
ಜಿಲ್ಲಾ ಮಟ್ಟದ ಅಡುಗೆಯವರು/
ಅಡುಗೆ ಸಹಾಯಕರ ಹುದ್ದೆಗಳ ನೇರ ನೇಮಕಾತಿ
ಸಮಿತಿ, ಶಿವಮೊಗ್ಗ-ಜಿಲ್ಲೆ, ಶಿವಮೊಗ್ಗ.

group d 123